





ಫ್ರಾಕ್‌ಗಳನ್ನು, ಸೀರೆಗಳನ್ನು ಧರಿಸಿ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅಂದಿನ ಕಾಲದಲ್ಲೂ ಪ್ರಕೃತಿಯ ಬಗ್ಗೆ ಅವರಿಗಿದ್ದ ಬಾಂಧವ್ಯ ಗುರುತಿಸಿ ಅವರಿಗೆ ನ್ಯಾಚುರಲ್ ಬ್ಯೂಟಿಗಳೆಂದೇ ಕರೆಯಲಾಗುತ್ತಿತ್ತು. ಅದುವೇ ಟ್ರೆಂಡ್ ಇದೀಗ ಮತ್ತೆ ಮರಳಿ ಬಾಲಿವುಡ್ ಅಂಗಳಕ್ಕೆ ಎಂಟ್ರಿ ಕೊಟ್ಟಿದೆ.

ಇದೀಗ ಬಾಲಿವುಡ್ ತಾರೆಯರು ಕೂಡ ದೊಡ್ಡ ದೊಡ್ಡ ಹೂವಿನ ಚಿತ್ತಾರಗಳಿರುವ ಸೀರೆಗಳು, ಗೌನ್‌ಗಳು ಹಾಗೂ ಫ್ರಾಕ್‌ಗಳನ್ನು ಧರಿಸುತ್ತಿದ್ದಾರೆ. ಮಾಡೆಲ್‌ಗಳೂ ರ‍್ಯಾಂಪ್ ಮೇಲೆ ಈ ತರಹದ ಚಿತ್ತಾರಗಳಿರುವ ವಿವಿಧ ವಿನ್ಯಾಸದ ಉಡುಪು ಧರಿಸಿ ಒಂದು ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿದ್ದಾರೆ.

## ಸೀರೆ ಮೇಲೆ ಹೂವಿನ ತೋರಣ

ಮೊದಲೆಲ್ಲಾ ಪ್ಲೇನ್ ಸೀರೆಗಳ ಮೇಲೆ ಹೂವಿನ ಚಿತ್ತಾರವಿರುವ ಬ್ಲೌಸ್ ಧರಿಸುವ ವಾಡಿಕೆಯಿತ್ತು. ಆದರೆ ಇದೀಗ ಸೀರೆಗಳ ಮೇಲೆಯೇ ದೊಡ್ಡ ದೊಡ್ಡ ಹೂವಿನ ಪ್ರಿಂಟ್ ಹೆಚ್ಚು ಮಹಿಳೆಯರನ್ನು ಆಕರ್ಷಿಸುತ್ತಿದೆ. ಜೊತೆಗೆ ಪ್ಲೇನ್ ಅಥವಾ ಡಿಸೈನರ್ ಬ್ಲೌಸ್ ತೊಡಬಹುದು. ಸೀರೆಗಳ ಮೇಲಿನ ಹೂವಿನ ಚಿತ್ತಾರ ಕಾಂಟ್ರಾಸ್ಟ್‌ನಲ್ಲಿದ್ದರೂ ಇನ್ನೂ ಚೆನ್ನಾಗಿ ಕಾಣುತ್ತದೆ. ಇದೀಗ ಇದೇ ವಿನ್ಯಾಸದ ರೇಷ್ಮೆ ಸೀರೆ, ಟಿಶ್ಯೂ ಸೀರೆ, ಆರ್ಗನ್ಝಾ ಸೀರೆ, ನೆಟ್ ಸೀರೆ... ಹೀಗೆ ಎಲ್ಲ ವೈವಿಧ್ಯದ ಸೀರೆಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಇಂತಹ ಗ್ರ್ಯಾಂಡ್ ಲುಕ್ ನೀಡುವ ಸೀರೆಗಳನ್ನು ಶುಭ ಸಮಾರಂಭಕ್ಕೆ ಇಲ್ಲವೇ ಯಾವುದೇ ದೊಡ್ಡ ದೊಡ್ಡ ಪಾರ್ಟಿಗಳಿಗೆ ಉಟ್ಟುಕೊಳ್ಳಬಹುದು. ಈ ತರಹದ ಸೀರೆಗಳು ಅದ್ದೂರಿಯಾಗಿ ಕಾಣುವುದರಿಂದ ಇದರ ಜೊತೆಗೆ ಹೆಚ್ಚು ಒಡವೆಗಳನ್ನು ತೊಡುವ ಅವಶ್ಯಕತೆಯಿಲ್ಲ. ಈ ತರಹದ ಲೈಟ್ ವೇಟ್ ಫ್ಲೋರಲ್ ಸೀರೆಗಳು ಇದೀಗ ಕಾರ್ಪೊರೇಟ್ ವಲಯದಲ್ಲಿ ಸಾಕಷ್ಟು ಟ್ರೆಂಡಿಯಾಗಿವೆ. ಕಾಂಟ್ರಾಸ್ಟ್ ಫ್ಲೋರಲ್ ಸೀರೆಗಳ ಮೇಲೆ ಸಿಂಪಲ್ಲಾಗಿರುವ ಫುಲ್ ಸ್ಲೀವ್ಸ್ ಬ್ಲೌಸ್ ತೊಡಬಹುದು. ಇದು ರಿಚ್ ಲುಕ್ ನೀಡುತ್ತದೆ. ಈ ತರಹದ ಟ್ರೆಂಡ್ ಇದೀಗ ಕಚೇರಿಗೆ ಹೋಗುವ ಮಹಿಳೆಯರ ಹಾಟ್ ಫೇವರೆಟ್ ಎಂದೇ ಹೇಳಬಹುದು.

ಮೊದಲೆಲ್ಲಾ ಜೀನ್ಸ್ ಅಥವಾ ಪಲಾಜೊ ಪ್ಯಾಂಟ್, ಲಾಂಗ್ ಸ್ಕರ್ಟ್ ಮೇಲೆ ಪ್ಲೇನ್ ಟಾಪ್ ಅಥವಾ ಚಿಕ್ಕ ಚಿಕ್ಕ ಹೂವಿನ ಚಿತ್ತಾರದ ಟಾಪ್‌ಗಳನ್ನು ತೊಡುವುದು ಸಾಮಾನ್ಯವಾಗಿತ್ತು. ಆದರೆ ಈಗ ಲಾಂಗ್ ಟಾಪ್, ಶಾರ್ಟ್ ಟಾಪ್, ಕ್ರಾಪ್ ಟಾಪ್, ಟೀ ಶರ್ಟ್ ಎಲ್ಲದರ ಮೇಲೆ ದೊಡ್ಡ ದೊಡ್ಡ ಚಿತ್ತಾರದ ವಿವಿಧ ಬಣ್ಣದ ಹೂಗಳ ವಿನ್ಯಾಸವು ಹೆಚ್ಚು ಜನಪ್ರಿಯವಾಗಿದೆ. ಚೂಡಿದಾರ್, ಅನಾರ್ಕಲಿ, ಲೆಹೆಂಗಾ, ಕುರ್ತಾ, ಗೌನ್‌ನಂತಹ ಉಡುಪುಗಳಲ್ಲೂ ಈಗ ದೊಡ್ಡ ದೊಡ್ಡ ಚಿತ್ತಾರದ ಹೂವಿನ ವಿನ್ಯಾಸವು ರಾರಾಜಿಸುತ್ತಿದೆ. ಯಾವುದೇ ಬಣ್ಣದ ಪ್ಲೇನ್ ಚೂಡಿದಾರ್ ಜೊತೆಗೆ ಸಂಪೂರ್ಣ ಹೂವಿನ ಚಿತ್ತಾರದ ದುಪಟ್ಟಾ ಧರಿಸಿದರೆ ಇನ್ನೂ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಈಗೀಗ ಕೆಲ ಸೆಲೆಬ್ರಿಟಿಗಳು ಗಾಢ ಬಣ್ಣಗಳಾದ ಕೆಂಪು, ಹಸುರು, ನೀಲಿ ಬಣ್ಣಗಳ ಮೇಲೆ ಬಿಳಿ ಹೂವಿನ ದೊಡ್ಡ ಚಿತ್ತಾರದ ಉದ್ದನೆಯ ಮ್ಯಾಕ್ಸಿ ಧರಿಸಿ ಫೋಟೊಶೂಟ್ ಮಾಡಿಸಿಕೊಂಡು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದು, ಇವರನ್ನೇ ಅನುಸರಿಸುವ ಇನ್ನು ಕೆಲ ನಟಿಯರು ಹೂವಿನ ಚಿತ್ತಾರದ ಡ್ರೆಸ್ ಧರಿಸುವ ಮೂಲಕ ಈ ಟ್ರೆಂಡ್‌ಗೆ ಬೆಂಬಲ ನೀಡಿದ್ದಾರೆ. ಹಾಗೇ ಪಾರ್ಟಿ ಅಥವಾ ಗೆಟ್ ಟುಗೆದರ್‌ನಲ್ಲಿ ಧರಿಸುವ ಶಾರ್ಟ್ ಸ್ಕರ್ಟ್‌ಟಾಪ್, ಮಿನಿ ಡ್ರೆಸ್‌ಗಳಲ್ಲೂ ಈಗ ಈ ಚಿತ್ತಾರ ನಳನಳಿಸುವಂತಿವೆ. ಇದರೊಂದಿಗೆ ಅದೇ ಬಣ್ಣದ, ಅಂತಹದ್ದೇ ವಿನ್ಯಾಸವಿರುವ ಹ್ಯಾಂಡ್ ಬ್ಯಾಗ್‌ಗಳು ಇನ್ನಷ್ಟು ಸ್ಟೈಲಿಷ್ ಲುಕ್ ನೀಡುತ್ತಿವೆ.

ಪುಟಾಣಿಗಳಿಗೂ ಹೂವಿನ ವಿನ್ಯಾಸದ ಉಡುಗೆ ಚೆನ್ನಾಗಿ ಕಾಣುತ್ತದೆ. ಸ್ಲೀವ್‌ಲೆಸ್, ಆಫ್ ಶೋಲ್ಡರ್, ಲಾಂಗ್ ಸ್ಲೀವ್, ಪಫ್ ಸ್ಲೀವ್ ಸೇರಿದಂತೆ ಹಲವು ಬಗೆಯ ಸ್ಲೀವ್‌ಗಳ ಮೂಲಕ ಮಿನಿ ಫ್ರಾಕ್‌ಗಳು ಮೋಡಿ ಮಾಡುತ್ತಿವೆ. ಸದ್ಯ ವಿ ನೆಕ್ ಜೊತೆಗೆ ಪಫ್ ಸ್ಲೀವ್ ಟ್ರೆಂಡಿಂಗ್‌ನಲ್ಲಿದೆ. ಬೇಸಿಗೆಯಲ್ಲಿ ಈ ತರಹದ ಮಿನಿ ಫ್ರಾಕ್‌ಗಳ ಜೊತೆಗೆ ಹ್ಯಾಟ್‌ಗಳು ಆಕರ್ಷಕ ಲುಕ್ ನೀಡುತ್ತವೆ. ಹೂವಿನ ಚಿತ್ತಾರವಿರುವ ಉಡುಪಿಗೆ ಮ್ಯಾಚ್ ಆಗುವ ಫ್ಲೋರಲ್ ಜುವೆಲ್ಲರಿ, ಬ್ಯಾಗ್, ಹೈಹೀಲ್ಡ್ ಚಪ್ಪಲಿ ಅಥವಾ ಶೂ ಧರಿಸುವ ಮೂಲಕ ಅದರ ಅಂದವನ್ನು ಇನ್ನೂ ಇಮ್ಮಡಿಗೊಳಿಸಬಹುದು. ಹಲವು ದಶಕಗಳಿಂದಲೂ ಈ ವಿನ್ಯಾಸದ ಫ್ರಾಕ್‌ಗಳು ವಿಭಿನ್ನವಾಗಿ ಎಲ್ಲಾ ವಯೋಮಾನದವರನ್ನು ಸೆಳೆಯುತ್ತಿದ್ದು, ಯಾವತ್ತಿಗೂ ಔಟ್ ಆಫ್ ಫ್ಯಾಷನ್ ಎನಿಸದ ಉಡುಪು ಇದಾಗಿದೆ.